ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂ:ಜ.ಕೃ.ನಿ/ಕೃ.ಯಾಂ./ಕೃ.ಸ./ಟಿಪ್ಪಣಿ(ಮೇವು ಕಟಾವು ಯಂತ್ರ)/2018-19

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು.
ದಿನಾಂಕ : 18-12-2018

ಇವರಿಗೆ:-

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು,
ಕೃಷಿ ಇಲಾಖೆ (ಎಲ್ಲಾ 29 ಜಿಲ್ಲೆಗಳು).

ವಿಷಯ:- ಕೃಷಿ ಯಾಂತ್ರೀಕರಣ ಯೋಜನೆಯಡಿ ಮೇವು ಕಟಾವು ಯಂತ್ರ (ಛಾಫ್ ಕಟರ್) ವಿತರಿಸಲು ಅನುಮತಿಸುವ ಬಗ್ಗೆ.

ಉಲ್ಲೇಖ:-
1. ಈ ಕಛೇರಿ ಸುತ್ತೋಲೆ ಸಂಖ್ಯೆ:ಉಕೃನಿ/ಕೃ.ಯಾಂ.ಸೂ.ನೀ/ ಕೃಯಾಂ/ಅನುಷ್ಠಾನ/ಸು/18-19, ದಿನಾಂಕ : 17-05-2018.
2. ಈ ಕಛೇರಿ ಸುತ್ತೋಲೆ ಸಂಖ್ಯೆ:ಉಕೃನಿ/ಕೃ.ಯಾಂ.ಸೂ.ನೀ/ಕೃಯಾಂ/ಅನುಷ್ಠಾನ/ಸು/18-19, ದಿನಾಂಕ : 28-07-2018
3. ಮಾನ್ಯ ಕೃಷಿ ಸಚಿವರ ಟಿಪ್ಪಣಿ ಸಂ:ಕೃ.ಸ./4365/2018-19, ದಿ:11-12-2018.
4. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಕೃಷಿ ಸಚಿವರ ಅನುಮೋದನೆಯಂತೆ

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸುತ್ತೋಲೆ ಯಲ್ಲಿ 2018-19ನೇ ಸಾಲಿನ ರಾಜ್ಯ ವಲಯ ಚಾಲ್ತಿ ಯೋಜನೆಯಡಿ ಕೃಷಿ ಪರಿಕರ ಮತ್ತು ಗುಣ ನಿಯಂತ್ರಣ (ಲೆ.ಶೀ:2401-00-103-0-15) ಯೋಜನೆಯಡಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮ ಅನುಷ್ಠಾನದ ಕುರಿತ ಮಾರ್ಗಸೂಚಿಯ ವಿಶೇಷ ಸೂಚನೆ-1 ರಲ್ಲಿ *"ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳ ವರ್ಗದಡಿ ಛಾಫ್ ಕಟರ್ ಗಳನ್ನು (*) ನೀಡಲು ಅವಕಾಶವಿರುವುದಿಲ್ಲ"* ಎಂದು ಸೂಚಿಸಲಾಗಿತ್ತು.

ಆದರೆ, ಉಲ್ಲೇಖಿತ (3)ರ ಪತ್ರದಲ್ಲಿ ಮಾನ್ಯ ಕೃಷಿ ಸಚಿವರು ಮೇವು ಕತ್ತರಿಸುವ ಯಂತ್ರವನ್ನು ಈ ಹಿಂದಿನಂತೆ ಒಪ್ಪಂದದ ದರ ಕರಾರು ಯಾದಿಯಲ್ಲಿ ವಿತರಣೆ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಹಾಗೆಯೇ ಮಾನ್ಯ ಕೃಷಿ ಸಚಿವರು ಮತ್ತು ಸರ್ಕಾರದ ಕಾರ್ಯದರ್ಶಿಗಳು ಮೇವು ಕಟಾವು ಯಂತ್ರಗಳನ್ನು ವಿತರಿಸಲು ಕಡತದಲ್ಲಿ ಅನುಮೋದನೆಯನ್ನು ಸಹ ನೀಡಿರುತ್ತಾರೆ.

ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ ಮೇವು ಕಟಾವು ಯಂತ್ರ **(Chaff Cutter)** ಗಳನ್ನು ಕೃಷಿ ಯಾಂತ್ರೀಕರಣ ಯೋಜನೆಯಡಿ, ಈಗಾಗಲೆ ಉಲ್ಲೇಖ(2)ರ ಸುತ್ತೋಲೆಯಲ್ಲಿ ಜಿಲ್ಲೆಗಳಿಗೆ ನೀಡಲಾಗಿರುವ ವಾರ್ಷಿಕ ಅನುದಾನದ ಗುರಿಯೊಳಗೆ ಮಾರ್ಗಸೂಚಿಯಂತೆ ವಿತರಿಸಿ ವೆಚ್ಚ ಭರಿಸಲು ಅನುಮತಿ ನೀಡಲಾಗಿದೆ.

ಸಹಿ/-
ಕೃಷಿ ನಿರ್ದೇಶಕರು

ಪ್ರತಿಯನ್ನು:

1. ಮಾನ್ಯ ಕೃಷಿ ಸಚಿವರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಸದರಿ ಮಾಹಿತಿಯನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಕೋರಲಾಗಿದೆ.
2. ಶ್ರೀ.ರವೀಂದ್ರ ಶ್ರೀಕಂಠಯ್ಯ, ಮಾನ್ಯ ಶಾಸಕರು, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ, ಕೆಳಗಲಪೇಟೆ, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ರವರಿಗೆ ಆದರ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಆದರ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.

18/12

ಕೃಷಿ ನಿರ್ದೇಶಕರು

G:\R\Files\2018-19\5-Letters\Kannada Letters